Regn No BC 155

Sri
" SATYAVADI "
— DAILY —
MYSORE 4
45 th Year

Protect the cow

— ೨೧ —

ಸತ್ಯವಾದಿ

4—4—1961

ಸ್ಥಾಪಕರು— ಅರಮನೆ ಸಿಂಪ್ಲೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಕೋಲಾರದ ಚಿನದ ಗಣಿಗ್ಳಳು ಕೇಂದ್ರಕೆ

ವೀರಪತ್ನಿ

ಅಮೃತಸರ 13— ಜಲಿಯನವಾಲಾ ಬಾಗಿನಲ್ಲಿ ಹತ್ಯಾಕಾಂಡದಲ್ಲಿ ಒಬ್ಬರಾ ಭಗವತಸಿಂಗಂ ಪತ್ನಿ ರಕ್ಷಾದೇವಿಗೆ ಅಗ ಅವೃತಸರದ ಬ್ರಿಟಿಷ್ ಡೆಪ್ಯೂಟಿಕಮಿಷನರು ಪರಿಹಾರವಾಗಿ 2500೦ ರೂಗಳ ಚೆಕ್ಕನ್ನು ಕೊಟ್ಟರು : ಈ ವೀರ ಪತ್ನಿಯು ಯಾವ ಪರಿಹಾರ ತೆಗೆದುಕೊಳ್ಳಲು ತಿರಸ್ಕರಿಸಿ ಡೆಪ್ಯೂಟಿಕಮಿಷನರ ಎದುರಿಗೆ ಚೆಕ್ಕನ್ನು ಹರಿದುಹಾಕಿದರು — ಈಗ 70 ವರ್ಷ ವಯಸ್ಸಾಗಿರುವ ಈಕೆಯನ್ನು ರಾಷ್ಟ್ರಾಧ್ಯಕ್ಷರು ಕಂಡು 15 ನಿಮಿಷಗಳ ಕಾಲ ಮಾತನಾಡಿ ಕಷ್ಟಸುಖ ವಿಚಾರಿಸಿದರು.

ಭಂಗಾಂದ ಪದಕಕ್ಕೆ

ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಹುಬ್ಬಿ ಕರ್ನಾಟಕ ಮೆಡಿಕಲ್ ಕಾಲೇಜಿನ ಡಾ|| ಕಾಲೇಷುವಂ ಶತಾಬ್ದಿ ಸಮಾರಂಭ ಸಮಿತಿಯವರು ರೂ. 3500 ಕೊಟ್ಟು, ಪ್ರಥಮ ಎಂ ಬಿ ಬಿ ಎಸ್ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ಪಾಸುಮಾಡಿ, ಅನಾಟಮಿಯಲ್ಲಿ ಶೇಕಡ 65 ಕ್ಕೆ ಕಡಮೆಯಿಲ್ಲದೆ ನಂಬರು ಪಡೆಯುವ ವಿದ್ಯಾರ್ಥಿಗೆ ಭಂಗಾರದ ಪದಕವನ್ನು ಕೊಡಲು ಈ ಪುದವಟ್ಟು ಎಂದು ತಿಳಿಸಿರುವರು.

ಛತ್ರಪತಿ ಶಿವಾಜಿ

ನವದೆಹಲಿ 23— ಛತ್ರಪತಿ ಶಿವಾಜಿ ಗೌರವಾರ್ಥವಾಗಿ 15 ನಯೆಪೈಸೆಗಳ ವಿಶೇಷ ಅಂಚೇಚೀಟಿಯನ್ನು ಈ ತಾ|| 17 ರಂದು ಹೊಂಡಿಸಲಾಗುವುದು.

ನಾಳೆಯ ಪಂಚಾಂಗ

ಲಕ್ಷ್ಮೀನ ವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕಿಷ್ಣ ಜೋಯಿಸರಿಂದ

15 ಶನಿವಾರ ಅಮಾವಾಸ್ಯೆ (ಬೆ 10.33)
ಶೋಭಕೃತ್ (ಜೆ 7—28)

ಸ್ವಾತಂತ್ರ್ಯದ ಜ್ವಾಲೆ

ಅಮೃತಸರ 13— 42 ವರ್ಷಗಳ ಹಿಂದೆ ಜನರಲ್ ಡಯರಿಂದ ಜಲಿಯನ್ ವಾಲಾಬಾಗಿನಲ್ಲಿ ವಧೆಯಾದ 379 ಹುತಾತ್ಮರ ಸ್ಮಾರಕವನ್ನು ರಾಷ್ಟ್ರಾಧ್ಯಕ್ಷರಾದ ಡಾ || ಪ್ರಸಾದರು ಅನಾವರಣೆ ಮಾಡುತ್ತಾ, ಅದು ಜಲಿಯನವಾಲಾಬಾಗಿನ ಇತಿಹಾಸದಲ್ಲಿ ' ಸ್ವಾತಂತ್ರ್ಯದ ಜ್ವಾಲೆ' ಎಂದು ನಾಮಕರಣ ಮಾಡಿದರು.

೦ ೦

ಏಕಮತ್ಯ

ಅಮೃತಸರ 13 — ಏಕಮತ್ಯವೇ ಈ ಕಾಲದ ಅವಶ್ಯಕತೆ ಎಂದು ಜಲಿಯನ ವಾಲಾಬಾಗು ಹುತಾತ್ಮರ ಸ್ಮಾರಕ ಅನಾವರಣೆ ಕಾಲದಲ್ಲಿ ಡಾ || ಪ್ರಸಾದರು ಮತ್ತು ನೆಹರುರವರು ಮಾಡಿದ ಭಾಷಣದಲ್ಲಿ ತಿಳಿಸಿದರು.

೦ ೦

ಆಯುರ್ವೇದ ಗ್ರಂಥಗಳು

ನವದೆಹಲಿ 12 — ಆಯುರ್ವೇದ ಗ್ರಂಥಗಳನ್ನು ಹಿಂದಿ ಮತ್ತು ಇಂಗ್ಲೀಷು ಭಾಷೆಗಳಿಗೆ ತರ್ಜುಮೆ ಮಾಡುವ ವಿಷಯವು ಪುರಾತಾದವರ ಪರಿಶೀಲನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

೦ ೦

ರೈಲಿನಲ್ಲಿ ಜನನ

ನಂಜನಗೂಡು 13— ನಂಜನಗೂಡಿನಿಂದ ಮೈಸೂರಿಗೆ ಹೊಂಟ ಪಟಲ್ ರೈಲಿನಲ್ಲಿ ಕಂಡಾವುಂದ ಚಿಕ್ಕತಾಯಮ್ಮ ಶಿಶುವನ್ನು ಪ್ರಸವಿಸಿದಳು : ಜೊತೆ ಪ್ರಯಾಣಿಕರು ಸೂಲಗಿತ್ತಿಯಾಗಿ ನೆರವು ನೀಡಿದರು : ರೈಲು 20 ನಿಮಿಷ ನಿಲ್ಲಿಸಲ್ಪಟ್ಟಿದ್ದಿತು.

೦ ೦

ಸಕ್ಕರೆಬೆಲೆ

ನವದೆಹಲಿ 13— ಸಕ್ಕರೆಬೆಲೆ ಇಳಿಯಲು ಕಬ್ಬಿನ ಬೆಲೆ ಹೆಚ್ಚಿಗೆ ಕಬ್ಬಿನ ಬೆಲೆ ಇಳಿಸುವುದಂ ಮೂಲಕ ಸಾಧ್ಯವೆಂದು ಬೇಸಾಯ ಉಪಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಲೋಕಸಭೆಯಲ್ಲಿ ತಿಳಿಸಿದರು.

ಇನ್ನೂ ಯೋಜನೆಗಳ

ಅಮೃತಸರ 13— ಭಾರತವು ಐದನೇ ಯೋಜನೆಯಲ್ಲಿ ಸ್ವಪೂರ್ಣವಾಗುವುದೆಂದು ಪಂ || ನೆಹರು ಇಲ್ಲಿ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಸೌಹಾರ್ದ ಕಾಫಿ ಸೇವನೆ

ನವದಹಲಿ 13— ಬುಧವಾರ ಲೋಕಸಭೆಯಲ್ಲಿ ರಕ್ಷಣಾ ಅಂದಾಜಿನ ಚರ್ಚೆಯಲ್ಲಿ ಭೀಕರವಾಗ್ಯುದ್ಧ ನಡೆಸಿದ ಕೃಷ್ಣಾಲಿನಿ ಮತ್ತು ಕೃಷ್ಣವೆ ನನ್ನರು ಸಂಜೆ ಪೇಕ್‌ಹ್ಯಾಂಡು ಮಾಡಿ, ಜೊತೆಯಲ್ಲಿ ಖುಷಿಯಾಗಿ ಕಾಫಿ ಕುಡಿದರು.

ಅಕ್ರಮ ಸಾಗಾಣಿಕೆ

ಮಂಗಳೂರು — ಗೋವಾದಿಂದ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಸುಮಾರು ರೂ 8500 ಮೌಲ್ಯದ ಲವಂಗ ಮತ್ತು "ಬ್ರಾಂಡಿಯನ್ನು ಕುಂದಾಪುರ ರೇವಿನಲ್ಲಿ ಹಿಡಿಯಲ್ಪಟ್ಟಿತೆಂದು ಇಲ್ಲಿಗೆ ವಾರ್ತೆ ಬಂದಿದೆ.

ವಿಮಾನ ಹಿಡಿಯಲ್ಪಟ್ಟಿತು

ಲಿಯೊವಾಲ್ಡವಿಲೆ 13— ಅಧ್ಯಕ್ಷ ಶೊಂಬೆಯವರ ಕಾಟಂಗಾ ಪಡೆಗಳಿಗೆ 7 ಟ್ರಕ್ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು ಕೊಂಡೊಯ್ಯುತ್ತಿದ್ದ ವಿಮಾನವನ್ನು ವಿಶ್ವಸಂಸ್ಥೆ ಅಧಿಕಾರಿಗಳು ಹಿಡಿದಿರುವರು.

ನವದೆಹಲಿ 13— ಕೋಲಾರದ ಚಿನ್ನ ಗಣಿಯನ್ನು ವೈಸೂರು ಸರಕಾರದಿಂದ ಭಾರತ ಸರಕಾರವು ತೆಗೆದುಕೊಂಡು ಅದನ್ನು ಕೇಂದ್ರದ ಆಡಳಿತದಲ್ಲಿ ನಡೆಸುವ ವಿಷಯವನ್ನು ಭಾರತ ಸರಕಾರ ಪರಿಶೀಲಿಸುತ್ತಿರುವದೆಂದು ಶ್ರೀ ಮುರಾರ್ಜಿ ದೇಸಾಯರು ಲೋಕಸಭೆಯಲ್ಲಿ ತಿಳಿಸಿದರು.

★

ಬೆಲೆ ಹತೋಟಿ

ಮದರಾಸು 13— ಬೆಲೆ ಹತೋಟಿಯು ಕೂಲಿ ಪಡೆಯುವವರಿಗೆ ಸಹಾಯಕವೆಂದು ಮಾಜಿ ಭಾರತ ಹಣಕಾಸಿನ ಮಂತ್ರಿ ಕೃಷ್ಣಮಾಚಾರಿಯವರು ಹೇಳಿರುವರು; ಬೆಲೆ ಹತೋಟಿ ಇಲ್ಲದ ಯೋಜನೆಗಳು ಪ್ರವಾಹ ಬಾಗಿಲುಗಳು ತೆರೆದಿರುವ ಅಣಕಟ್ಟುಗಳಾಕೆ ಎಂದೂ ತಿಳಿಸಿರುವರು.

ಶಾಸನ ಸಭೆಯಲ್ಲಿ ಗೊಂದಲ

ಬೆಂಗಳೂರು 13— ಮಧ್ಯಾಹ್ನ ಟೀ ಟೈಂ ನಂತರ ಶಾಸನಸಭೆಯಲ್ಲಿ ಗಲಾಟೆಗಳು ಆರಂಭವಾಗಿ, ವಿರೋಧ ಪಕ್ಷದ ಸದಸ್ಯರಿಗೂ ಸ್ಪೀಕರು ಮತ್ತು ಮಂತ್ರಿಗಳಿಗೂ ವಾಕ್ಚಾತುರ್ಯ ನಡೆದು, ಸಭೆಯಲ್ಲಿ ಗೊಂದಲವಾಗಿ, ಸ್ಪೀಕರು ಸಭೆಯನ್ನು ಅಡ್ಜರ್ನ್ ಮಾಡಿದರು.

ಹೇಯ ಕೃತ್ಯ

ಬೆಂಗಳೂರು ಶಾಸನಸಭಾ ಸದಸ್ಯರ ಭವನದಲ್ಲಿ ಭಾನುವಾರ ಮಧ್ಯಂತರಾವಧಿಯ ವೇಳೆ ನಡೆದ ಹೇಯಕೃತ್ಯದಲ್ಲಿ ಶಾಸನ ಸಭಾ ಸದಸ್ಯರಾಗಲಿ ಸಂಬಂಧಿಸಿಲ್ಲವೆಂದಕೆ. ಸದಸ್ಯರೊರ್ವರ ಅತಿಥಿ ಮಹಿಳೆಯರು ಸಂಬಂಧಿಸಿದವರೆಂದೂ, ಹೆಂಗಸಿನ ಪತ್ತೆಯಾಗಿ ಅವಳು ವಾಸವಿಲ್ಲದವಳೆಂದೂ ಹೇಳಲಾಗಿದೆ.

[illegible] ರ ರಂಗ

ಕೆಲ್ಕತ್ತಾದಲ್ಲಿ [illegible] ಕಾರ್ಪೊರೇಷನ್ ಅಲ್ಡರ್ಮೆನ್ ಚುನಾವಣೆಯು ಏದು ಸ್ಥಾನಗಳ [illegible] ಗೆ ಚುನಾಯಿತರಾದರು.

ಮಾಸ್ಕೋದಲ್ಲಿ [illegible] ಪ್ರಸಿದ್ಧವಾದ ಕಲ್ಲಿಜ್ಜಲುಗಣಿ ಪಟ್ಟಣವಾದ ಸೋವೆಟ್ಸ್ಕಾಯಾ ಜಾಬಿಯೆತ್ಸ್ಕಗೆ 'ಕೈಟ್ಲೀವ್' ಎಂದು ಹೆಸರಿಡಲಾಯಿತು.

[illegible]ನ ವಾರ್ತೆಯಂತೆ ಬರ್ಕಾ-ನಂಗಾಲ ಪ್ರಾಜೆಕ್ಟಿನ 3 ಮಂದಿ [illegible] ಇಂಜಿನಿಯರುಗಳೂ ಒಬ್ಬ ಗುಮಾಸ್ತೆಯೂ ಅನೀತಿ ಆಪಾದನೆಗಾ [illegible] ಪಟ್ಟರುವರು.

[illegible] ರಷ್ಯಾವು ಬಾಹ್ಯಾಕಾಶಕ್ಕೆ ಕಳುಹಿಸಿದ್ದ 27 ವರ್ಷದ ವೈಮಾನಿಕ ಗಗಾರಿನ್ 108 ನಿಮಿಷಗಳು ನಾಲ್ಕಾವರೆ ಟನ್ನಿನ ಬಾಹ್ಯಾಕಾಶ ನೌಕೆಯಲ್ಲಿದ್ದು ವಾಪಸ್ಸಾದನು ; ರಷ್ಯಾಕ್ಕೆ ಎಲ್ಲ ಕಡೆಗಳಿಂದಲೂ ಅಭಿನಂದನೆ ಹರಿದಿದೆ.

ತೆರಿಗೆ ನೀತಿ

ಬಟ್ಟೆನಲ್ಲಿ ಸೂರು ವರ್ಷಗಳ ಹಿಂದೆ ಆದಾಯ ತೆರಿಗೆ ವಿಷಯ ಬಂದಾಗ ಜಾರ್ಜ್ ಸ್ಪೆನ್ಸರ್ ವಿ.ಲ್'ಂವರು– ತೆರಿಗೆಯು ವ್ಯಕ್ತಿಯ ಉತ್ಪತ್ತಿಯ ಬದಲು, ವ್ಯಕ್ತಿಯ ಖರ್ಚನ್ನು ಅವಲಂಬಿಸಬೇಕೆಂದು ಹೇಳಿದರು.

ರಷ್ಯಾದಲ್ಲಿ ವೈದ್ಯಕೀಯ ಪರಿಸ್ಥಿತಿ !

ಸೋವಿಯತ್ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ 400000 ಜನ ಡಾಕ್ಟರುಗಳು ಕೆಲಸಮಾಡುತ್ತಿದ್ದಾರೆ (ಇಡೀ ಜಗತ್ತಿನ ಡಾಕ್ಟರರ ಸಂಖ್ಯೆಯಲ್ಲಿ ಇದು ತೃತೀಯವಾಗುತ್ತದೆ : ಇಡೀ ಯೂರೋಪಿನ ಡಾಕ್ಟರರ ಸಂಖ್ಯೆಯಲ್ಲಿ ಅರ್ಧದಷ್ಟಾಗುತ್ತದೆ) ಸೋವಿಯತ್ ನಾಡಿನಲ್ಲಿ ವೈದ್ಯಕೀಯ ಸಹಾಯವು ಪುಕ್ಕಟೆಯಾಗಿ ಲಭಿಸುತ್ತದೆ : ಈಗ ಅಲ್ಲಿ 1750000 ಆಸ್ಪತ್ರೆ ಮಂಚಗಳಿವೆ.

ದತ್ತಾತ್ರೇಯ ಋಷಿ

ದತ್ತಾತ್ರೇಯ ಋಷಿಯು ಪ್ರಾತಃಸಂಧ್ಯವನ್ನು ಶ್ರಾಯಾಗದಲ್ಲೂ, ಮಧ್ಯಾಹ್ನೀಕವನ್ನು ಹೇಮಕೂಟದಲ್ಲೂ, ಸಂಜೆ ಪೂಜೆಯನ್ನು ಶ್ರೀರಂಗದಲ್ಲೂ ನಡೆಸುತ್ತಿರುವುದಾಗಿ ರಾಜ ಮಾಹಾ ಅವರನ್ನು ಭೇಟಿ ಮಾಡಿದಾಗ ತಿಳಿಸಿದರು.

Our Bangalore Sales Depot address—
71/4 Arcot Sreenivasachar St., Bangalore 2.

★ SEE TO-DAY ★

At Woodlands : Glorious 2nd Week

Never before on the Screen— The glories, The Triumphs, the Conquests of the World's mightiest man !

HERCULES UNCHAINED

Steve Reeves as Hercules — — in Eastman Color

See— War of Chariots, Arena of Tigers, Court of Lover, Temptress Lydia, Contest of Giants, Combat of Kings

ಅಪೆರಾ— **10-4-61** ರಿಂದ

.... ಪ್ರತಿ ಸಂಸಾರವೂ ನೋಡಬೇಕಾದ ಸಾಮಾಜಿಕ ಚಿತ್ರ ....

ಉತ್ತಮಪುತ್ರ ರತಂ (ತಮಿಳು)

ಪಾತ್ರ— ಕನ್ನಾಂಬಾ, ಮಾಲಿನಿ, ಪಂಡರಿಬಾಯಿ, ಎಂ ಎಸ್ ರಾಜ್ಯಂ ಏ ಕೆ ರಾಮಸ್ವಾಮಿ, ಕುಲದೈವಂ ರಾಜಗೋಪಾಲ್, ಸಹಸ್ರನಾಮಂ, ಬಾಲಾಜಿ

SHAKTI

SUDHA

**

A Superb Tonic

ನಿಮಗೆ ಬಲಹೀನತೆ ಉಂಟೇ ?
ಪ್ರಾಗಾದರೆ ವೈದ್ಯರಾದ ಎ. ಎಲ್ ಸರ್ಕಾರ್ (ಸರ್ಕಾರಿ ರಿಜಿಸ್ಟರ್ಡ್) ವಕ್ತ ಡಾ॥ ಎಸ್. ಎಂ. ಆರ್. ಮೋಥಿಂವನ್ನು ಖುದ್ದು ಭೇಟಿಮಾಡಿ

ಅವರು ನರಗಳ ನಿಶ್ಯಕ್ತಿ, ಬಹುಮೂತ್ರ, ಮೂಲಾಶ ವ್ಯಾಧಿ ಮುಂತಾದ ವ್ಯಾಧಿಗಳಿಗೆ ವಿಫಲವಾಗದ ಚಿಕಿತ್ಸೆ ನಡೆಸುವರು
ನರಗಳ ನಿಶ್ಯಕ್ತಿಗೆ ವಿದ್ಯುಚ್ಛಕ್ತಿ (ಎಲೆಕ್ಟ್ರಿಕ್ ಥೆರೊಪಿ) ಮೂಲಕ ಚಿಕಿತ್ಸೆ
ಸಲಹೆಯ ಕಾಲ : ಬೆಳಿಗ್ಗೆ 10 ರಿಂದ 1 ಗಂಟೆ ಸಂಜೆ : 5 ರಿಂದ 6-30 ಗಂಟೆ
ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆ
ಸರ್ಕಾರ್ ಡಿಸ್ಪೆನ್ಸರಿ
263 ರಘುಲಾಲ್ ಅಂಡ್ ಕೋ ಬಳಿ, ಮೈಸೂರು

Edited, Printed & Published by the Proprietor Dharma Prachara Nirata M. S. KrishnaRao, at the Satyavadi Press Chamarajapuram, Mysore 4.